# ಕಣ್ಮರೆಯಾಗುತ್ತಿರುವ ಬಿಕ್ಕೆ ಹಣ್ಣು

ಚಿತ್ರಬರಹ:
**ದೇವರು ಆರ್ ಭಟ್, ಕಲಗಾರು**



ಬಿಕ್ಕೆ ಹಣ್ಣು ಎಂದರೆ ಮಲೆನಾಡಿನ ಗುಡ್ಡಗಳಲ್ಲಿ ಬೆಳೆಯುವ ಒಂದು ಜಾತಿಯ ಪುಟ್ಟ ಗಿಡದ ಹಣ್ಣು. ಈ ಗಿಡ ಸುಮಾರು ಎರಡು– ಎರಡೂವರೆ ಅಡಿ ಎತ್ತರ ಮಾತ್ರ ಬೆಳೆಯುತ್ತದೆ. ನಂತರ ಕವಲೊಡೆದ ಕಾಂಡಗಳು ತುದಿಯಲ್ಲಿ ಮೊಂಡಾಗುತ್ತವೆ. ಚೂಪಾಗಿರುವ ಕಾಂಡದ ಎರಡೂ ಬದಿ ಅಂಟಿಕೊಂಡಂತಿರುವ ಪುಟ್ಟ ದಪ್ಪ ಎಲೆಗಳು. ಕಾಂಡದ ತುದಿ ಎಲೆಗಳ ಸಂದಿನಲ್ಲಿ ಚಿಕ್ಕ ಕುಡಿಗಳು. ಜೊತೆಯಲ್ಲಿ ತುದಿ– ಬುಡ ಚೂಪಾಗಿರುವ ಮಧ್ಯೆ ಉಬ್ಬಿಕೊಂಡಿರುವ ಕಾಯಿಗಳು.

ಮಳೆಗಾಲದ ಪ್ರಾರಂಭದ ಜೂನ್– ಜುಲೈ ತಿಂಗಳುಗಳಲ್ಲಿ ಬೇರೆ ಯಾವ ಕಾಡು ಹಣ್ಣುಗಳೂ ಸಿಗುವುದಿಲ್ಲ. ಒಂದೊಮ್ಮೆ ಸಿಕ್ಕರೂ ಅವು ಮಳೆಯ ನೀರನ್ನು ಹೀರಿಕೊಂಡು ಸಪ್ಪೆಯಾಗಿರುತ್ತವೆ, ಇಲ್ಲವೆ ಹುಳುಕಾಗಿರುತ್ತವೆ. ಆದರೆ ಬಿಕ್ಕೆ ಗಿಡ ಈ ಸಂದರ್ಭದಲ್ಲಿ ಸ್ವಾದಿಷ್ಟ ಹೋಳಿಗೆಯ ಹೂರಣದಂತಿರುವ ತಿರುಳನ್ನು ತನ್ನ ಮೇಲ್ಚರ್ಮ ಮತ್ತು ನಂತರದ ಚಿಪ್ಪಿನಂತಹ ರಚನೆಯಲ್ಲಿ ಬಚ್ಚಿಟ್ಟುಕೊಂಡು ನೀಡುತ್ತದೆ. ಉದುರಿದ ಹಣ್ಣನ್ನು ಕಚ್ಚಿ ಎರಡು ಹೋಳಾಗಿಸಿ ಬೆರಳಿನಲ್ಲಿ ಹೂರಣ ಸವಿಯುವುದು ರುಚಿಕರ ಅನುಭವ.

ಬುಗುರಿಗಳಲ್ಲಿಯೂ ಬಿಕ್ಕೆ ಬುಗುರಿ ಅತ್ಯಂತ ಶ್ರೇಷ್ಠ. ಚಿಣ್ಣರಿಗಂತೂ ಕೈಯಲ್ಲಿ ಬಿಕ್ಕೆ ಬುಗುರಿ ಇದೆ ಎಂದಾದರೆ ಎಲ್ಲಿಲ್ಲದ ಗತ್ತು. ಎಂತಹ ಗುನ್ನ ಹೊಡೆಯುವ ಬುಗುರಿ ಆಟಗಾರನಿಗೂ ಬಿಕ್ಕೆ ಬುಗುರಿಗೆ ಗುನ್ನ ಹೊಡೆಯುವುದೊಂದು ಸವಾಲು. ಬೇರೆ ಜಾತಿಯ ಮರಗಳ ಬುಗುರಿ ತಯಾರಿಸಿದಲ್ಲಿ ಅದು ಗುನ್ನದಾಟದಲ್ಲಿ ಒಡೆಯುವ ಸಾಧ್ಯತೆ ಹೆಚ್ಚು. ಬಿಕ್ಕೆ ಗಿಡದ ದಪ್ಪ ಕಾಂಡಗಳನ್ನು ಕೆತ್ತಿ ಅದಕ್ಕೆ ಮೊಳೆಯ ಚೆಂಡು ಮುರಿದು ಹೊಡೆದರೆ ಬಿಕ್ಕೆ ಬುಗುರಿ ತಯಾರಿ.

(8ನೇ ಪುಟ ನೋಡಿ)